(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ಮಾತನಾಡಿ. ಅವರು ಮುಗಿಸುವುದಿಲ್ಲ. ತಾವು ಮಾತನಾಡಿ. ನಾನು ನೀವು ಹೇಳುವುದನ್ನು ಕೇಳುತ್ತೇನೆ.

(ಇ) ವಿಷಯ :– ನಗರ ಪ್ರದೇಶಗಳಲ್ಲಿ (ಪುರ ಪಂಚಾಯ್ತಿ, ನಗರಸಭೆ ಮುಂತಾದವುಗಳಲ್ಲಿ ವಸತಿ ರಹಿತರಿಗೆ ನಿವೇಶನ ಮತ್ತು ಮನೆ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿ ರಚಿಸಿ ನಿವೇಶನ ನೀಡುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಉಪಾಧ್ಯಕ್ಷರೆ, ನಗರ ಪ್ರದೇಶಗಳಲ್ಲಿ (ಪುರ ಪಂಚಾಯ್ತಿ ನಗರಸಭೆ ಮುಂತಾದವುಗಳಲ್ಲಿ) ಆಶ್ರಯ ಸಮಿತಿಗಳನ್ನು ರಚಿಸಿ, ನಗರ ಪ್ರದೇಶದಲ್ಲಿರುವ ವಸತಿ ರಹಿತರಿಗೆ ನಿವೇಶನ ಮತ್ತು ಮನೆ ಕೊಡಿಸುವ ಬಗ್ಗೆ ಈ ಹಿಂದೆ ಇದ್ದಂತೆ ತಕ್ಷಣ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿ ರಚಿಸುವ ಕುರಿತು ಮಾನ್ಯ ವಸತಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಅಂಜನಮೂರ್ತಿ (ವಸತಿ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಉತ್ತರ ಈ ರೀತಿ ಇದೆ.

ಆಶ್ರಯ ಸಮಿತಿಗೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಗೆ ಸರ್ಕಾರವು ಅಧಿಸೂಚನೆ ಸಂಖ್ಯೆ SAMVYASHAE 33 SHASANA 2002, ದಿನಾಂದ 22.09.2003ರಲ್ಲಿ ತಿದ್ದುಪಡಿಯನ್ನು ಮಾಡಿದ್ದು ಸದರಿ ತಿದ್ದುಪಡಿಯ ಪ್ರಕಾರ ಆಶ್ರಯ ಮತ್ತು ಅಂಬೇಡ್ಕರ್ ವಸತಿ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯವು ಗ್ರಾಮ ಪಂಚಾಯಿತಿಗಳ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಕಾಯ್ದೆಯಡಿಯಲ್ಲಿ ನಿಯಮಾನುಸಾರ ಆಯ್ಕೆ ಮಾಡಿದ ಪಟ್ಟಿಯು ಅಂತಿಮ ಪಟ್ಟಿಯಾಗಿರುತ್ತದೆ. ಆದ್ದರಿಂದ 2004–05 ರಿಂದ ಆಶ್ರಯ ಸಮಿತಿಗಳನ್ನು ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೇಲಿನ ತಿದ್ದುಪಡಿಯು ಸರ್ಕಾರದ ಅಧಿಕಾರ ವಿಕೇಂದ್ರಿಕರಣದ ನೀತಿಯನ್ನು ಬಿಂಬಿಸುತ್ತದೆ. ಗ್ರಾಮ ಪಂಚಾಯ್ತಿಗಳಿಗೆ ಆಶ್ರಯ ಅಂಬೇಡ್ಕರ್ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆಯ ಅಧಿಕಾರವನ್ನು ನೀಡಿದಂತೆ, ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆಯ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಕೊಡುವುದು ಸರ್ಕಾರದ ಅಧಿಕಾರ ವಿಕೇಂದ್ರಿಕರಣದ ನೀತಿಯಾಗಿದೆ. ಆದ್ದರಿಂದ ನಗರ ಪ್ರದೇಶಗಳಲ್ಲಿ ಕೂಡಾ ಆಶ್ರಯ ಸಮಿತಿಯನ್ನು ರಚಿಸುವ ಅಗತ್ಯವಿರುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :– ಮಾನ್ಯ ಉಪಾಧ್ಯಕ್ಷರೆ, ನನ್ನ ಅಂದಾಜು ಇವರ ಸರ್ಕಾರದಲ್ಲಿರುವಂಥ ಅಧಿಕಾರಿಗಳಿಗೆ ನಮ್ಮ ಶಾಸಕರ ಬಗ್ಗೆ ಭಯಂಕರದ ಒಂದು ವಿರೋಧ ಮತ್ತು ಪೂರ್ವಾಗ್ರಹ ಪೀಡೆ ಇದೆ ಎಂದು ಹೇಳಿ ನನಗನ್ನಿಸುತ್ತದೆ. ಏಕೆಂದರೆ, ಹಿಂದಿನ ಸರ್ಕಾರ ನಗರ ಪ್ರದೇಶಗಳಿಗೆ ಶಾಸಕರ ಅಧ್ಯಕ್ಷತೆಯಲ್ಲಿ ಮತ್ತು ಮುನಿಸಿಪಾಲಿಟಿ, ಪುರ ಪಂಚಾಯಿತಿಗಳ ಉಪಾಧ್ಯಕ್ಷರ ಒಂದು ನೇತೃತ್ವದಲ್ಲಿ ಆ ಆಶ್ರಯ ಸಮಿತಿಯನ್ನು ಮಾಡಿತ್ತು. ಮನೆಗಳನ್ನು ಹಂಚಿಸ್ತು

ಮತ್ತು ಸೈಟ್‌ಗಳನ್ನು ಹಂಚಿತ್ತು. ಕಳೆದ ಒಂದು, ಒಂದೂಕಾಲು ವರ್ಷದಿಂದ ಈ ಹೊಸ ಸರ್ಕಾರ ಬಂದ ನಂತರ, ಒಂದು ಮನೆಯನ್ನೂ ಸಹ ಅಲ್ಲಿ ಹಂಚಲಿಲ್ಲ. ಆಶ್ರಯ ಅಲ್ಲಿಯ ಟೌನ್‌ನಲ್ಲಿರತಕ್ಕಂಥ ಬಡವರಿಗೆ ಆಶ್ರಯ ನಿವೇಶನಗಳನ್ನು ಕೂಡ ಹಂಚಲಿಲ್ಲ. ಒಟ್ಟಾರೆ, ಈ ಸರ್ಕಾರಕ್ಕೆ ಆ ಟೌನ್‌ನಲ್ಲಿರುವಂಥ ಬಡವರ ಬಗ್ಗೆ ಕಾಳಜಿ ಇದೆಯೋ ಇಲ್ಲವೋ ಎನ್ನುವಂಥ ಅನುಮಾನ ನಮಗೆ ಬರುತ್ತದೆ. ಆದರೆ, ಆ ಪಂಚಾಯಿತಿ ಮಟ್ಟದಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ಆಶ್ರಯ ಫಲಾನುಭವಿಗಳಿಗೆ ಹಂಚಲಿಕ್ಕೆ ಕಾನೂನಿನ ತೊಡಕಿತ್ತು. ಏಕೆಂದರೆ ಗ್ರಾಮೀಣಾಭಿವೃದ್ಧಿ ಕಾನೂನು ಅಮೆಂಡ್‌ಮೆಂಟ್ ಆಗಿದೆ. ಆದರೆ, ಇದಕ್ಕೆ ಅಂಥದ್ದೇನು ಅಮೆಂಡ್‌ಮೆಂಟ್ ಆಗಲಿಲ್ಲ. ಟೌನ್ ಪಂಚಾಯಿತಿಗಳಿಗೆ, ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಯಾವುದೇ ಅಮೆಂಡ್‌ಮೆಂಟ್ ಆಗಲಿಲ್ಲ. ಆದ್ದರಿಂದ ಶಾಸಕರ ನೇತೃತ್ವದಲ್ಲಿ ಆಶ್ರಯದ ಕಮಿಟಿಗಳನ್ನು ಮಾಡಲು ಏನೇನೂ ತೊಂದರೆಯಿಲ್ಲ. ಗ್ರಾಮ ಮಟ್ಟದಲ್ಲಿ ಆಶ್ರಯಮ ಮನೆಗಳನ್ನು ಕೊಡಲಿಕ್ಕೆ ಆಕ್ಟ್‌ನಲ್ಲಿಲ್ಲ ಎಂದು ಹೇಳುವಂಥದ್ದನ್ನು ಸರ್ಕಾರ ಹೇಳಿದೆ. ಅದನ್ನು ಮುಂದೆ ಹಾಕಿಕೊಂಡಿದೆ. ಆದರೆ, ನಗರ ಮಟ್ಟದಲ್ಲಿ ಆಶ್ರಯ ಸಮಿತಿಗಳನ್ನು ಮಾಡಲಿಕ್ಕೆ ಏನೇನೂ ತೊಂದರೆ ಇಲ್ಲ. ಆದ್ದರಿಂದ, ನಿಮ್ಮ ಸರ್ಕಾರ ಬಂದ ನಂತರ ಇದರ ರಚನೆಯಾಗಲಿಲ್ಲ. ಆಗಬೇಕಾಗಿತ್ತು. ದಯವಿಟ್ಟು ನಾನು ಹೇಳುತ್ತೇನೆ, ನಿಮ್ಮ ಈ ಹೇಳಿಕೆಯನ್ನು ವಾಪಸ್ಸು ಪಡೆಯಬೇಕು. ಹಿಂದಿನ ಸರ್ಕಾರ ಏನು ಮಾಡಿತ್ತು. ಅದೇ ರೀತಿಯಲ್ಲಿ ಆಶ್ರಯ ಸಮಿತಿಗಳನ್ನು ಶಾಸಕರ ನೇತೃತ್ವದಲ್ಲಿ ನಗರ ಪ್ರದೇಶದಲ್ಲಿ ಮಾಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :– ದಡ್ಡತನ ಅನ್ನಬೇಕೋ? ಅವಿವೇಕ ಅನ್ನಬೇಕೋ? ಅರ್ಥವಾಗುವುದಿಲ್ಲ. ಗ್ರಾಮ ಪಂಚಾಯತ್ ಕಾಯ್ದೆಗೂ, ಮುನಿಸಿಪಲ್ ಕಾಯ್ದೆಗೂ ಏನು ಸಂಬಂಧ? ಏನು ಉತ್ತರ ಕೊಡುತ್ತಾರೆ? ಯಾರಿಗೆ ಉತ್ತರ ಕೊಡುತ್ತಾರೆ? ನಾವೇನು ಇಲ್ಲಿ ಕಡಲೆ ಬೀಜ ತಿಂದುಕೊಂಡು ಕುಳಿತಿದ್ದೇವಾ ಅಥವಾ ಚೌಕಾಬರಾ ಆಡುವುದಕ್ಕೆ ಬಂದಿದ್ದೇವಾ ಅಂತ ಸ್ವಲ್ಪ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. We have asked a question pertaining to Municipal Administration. ಅಮೆಂಡ್ ಆಗಿಲ್ಲ. ನೀವು ಸಭೆಯ ಮುಂದೆ ನಿಂತುಕೊಂಡು ಇಂಥ ಉತ್ತರಗಳನ್ನು ಹೇಗೆ ಕೊಡುತ್ತೀರಿ ರೂರಲ್ ಪಂಚಾಯತ್ ಆಕ್ಟ್‌ಗೆ ಏನು ನೀವು ಅಮೆಂಡ್‌ಮೆಂಟ್‌ಗಳನ್ನು ತಂದು ಗ್ರಾಮ ಪಂಚಾಯಿತಿಗಳಿಗೆ ನಾವು ಅಮೆಂಡ್‌ಮೆಂಟ್ ಮಾಡಿದ್ದೇವೆ, ಅಂತ ಹೇಳುತ್ತೀರಿ. ಮತ್ತೆ ಪುರಸಭೆಯವರಿಗೆ ಅಧಿಕಾರ ಕೊಟ್ಟಿದ್ದೀರಾ? ಪುರಸಭೆಯವರಿಗೆ ಸೈಟ್ ಕೊಡುವುದಕ್ಕೆ ಬಿಟ್ಟಿದ್ದೀರಾ? ಪುರಸಭೆಯವರಿಗೆ ಮನೆ ಕೊಡುವುದಕ್ಕೆ ಬಿಟ್ಟಿದ್ದೀರಾ? ನಾನು ಮಾನ್ಯ ಆಂಜನಮೂರ್ತಿಯವರ ಬಗ್ಗೆ ಬಹಳ ಗೌರವವಿಟ್ಟುಕೊಂಡಿದ್ದೇನೆ. ಗೊತ್ತಿಲ್ಲದಿದ್ದರೆ ಗೊತ್ತಿಲ್ಲ. ಇನ್ನೊಂದು ದಿವಸ ಉತ್ತರ ಕೊಡುತ್ತೇನೆ ಎಂದು ದಯಮಾಡಿ ತಾವು ಹೇಳಬೇಕು. ಈ ತರಹ ಏನೋ ಬರೆದು ಕಳುಹಿಸಿದರು, ತರಾತುರಿಯಲ್ಲಿ ಹೀಗೆ ಉತ್ತರ ಕೊಟ್ಟುಬಿಟ್ಟು, ಶಾಸನ ಸಭೆಯಲ್ಲಿ ರೆಕಾರ್ಡ್‌ಗೆ ಹೋಗಿಬಿಟ್ಟರೆ, ಹೇಗೆ? ನಮ್ಮ ಮುಂದೆ ಮುನಿಸಿಪಲ್ ಆಕ್ಟ್ ಅಮೆಂಡ್ ಆಗಿರುವುದನ್ನು ತಂದಿಡಿ. ಇಲ್ಲದಿದ್ದರೆ ಪ್ರಿವಿಲೆಜ್ ಮೂವ್ ಮಾಡುತ್ತಿದ್ದೇನೆ. ತೆಗೆದುಕೊಳ್ಳಿ. ಮನೆಗೆ ಹೋಗ್ರಿ. ಏನ್ ಸಾರ್ ಇದು? ಮೆಲ್ಲಗೇಕೆ ಸಾರ್ ಮಾತನಾಡುವುದಕ್ಕೆ ಬರುತ್ತೇವೆ ಇಲ್ಲಿ?

ಶ್ರೀ ಆಂಜನ ಮೂರ್ತಿ (ವಸತಿ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಆರಗ ಜ್ಞಾನೇಂದ್ರರವರು ಮಾತನಾಡುತ್ತಾ ಹೇಳಿದರು.....

ಶ್ರೀ ಎನ್. ರಾಜಣ್ಣ :– ಒಂದು ನಿಮಿಷ....

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಮೂಡಿಗೆರೆ) :– ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ, ಸಾರ್, ಪಂಚಾಯತ್ ರಾಜ್ ಕಾಯ್ದೆಗೂ, ಮುನಿಸಿಪಲ್ ರಾಜ್ ಕಾಯ್ದೆಗೂ, ಮುನಿಸಿಪಲ್ ಆಕ್ಟ್‌ಗೂ ಏನೂ ಸಾರ್ ಸಂಬಂಧ?

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜು :– ....ಒಂದೂ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಹೆಚ್. ಕೆ. ಕುಮಾರಸ್ವಾಮಿ :– ಪಂಚಾಯತ್ ರಾಜ್ ಕಾಯ್ದೆಗೂ, ಮುನಿಸಿಪಲ್ ಕಾಯ್ದೆಗೂ ಸಂಬಂಧವೇನು?

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜು :– ಅಲ್ಲ, ಸ್ವಲ್ಪ ಯೋಚನೆ ಮಾಡಿ.

(ಗೊಂದಲ)

ಶ್ರೀ ಅಂಜನ ಮೂರ್ತಿ :– ನಾನು ಉತ್ತರ ಕೊಡುತ್ತಿದ್ದೇನೆ.

ಶ್ರೀ ಹೆಚ್. ಡಿ. ಬಸವರಾಜು :– ಉತ್ತರ ಕೊಡುವಿರಂತೆ. ಆದರೆ, ನಾನು ಪ್ರಸ್ತಾವನೆ....

(ಗೊಂದಲ)

ಶ್ರೀ ಅಂಜನ ಮೂರ್ತಿ :– ಉತ್ತರ ಕೇಳಿ.

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜು :– ಉತ್ತರ ಹೇಳಿದಿರಲ್ಲಾ ಸ್ವಾಮಿ, ಉತ್ತರದಲ್ಲಿ ಏನು ಅಂತ ಹೇಳಿದಿರಿ?

(ಗೊಂದಲ)

ಉಪಾಧ್ಯಕ್ಷರು :– ಯಾರಾದರೂ ಒಬ್ಬರು ಕೇಳಿ.

(ಗೊಂದಲ)

ಶ್ರೀ ಸಿ. ಟಿ. ರವಿ :– ಬಡವರಿಗೆ ಮನೆ ಇಲ್ಲ.

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜು :– ಆಶ್ರಯ ಸಮಿತಿಯ ವ್ಯಾಖ್ಯಾನ ಏತಕ್ಕೆ ಈ ರೀತಿ ದಾರಿ ತಪ್ಪುತ್ತಿದೆ? ಅಲ್ಲ, ಗ್ರಾಮ ಪಂಚಾಯಿತಿಗೂ, ನಗರ ಸಭೆಗೂ ಏನು ವ್ಯತ್ಯಾಸ? ನೀವು ಏಕೆ ವ್ಯಾಖ್ಯಾನವನ್ನು ಈ ರೀತಿ ಮಾಡುತ್ತಿದ್ದೀರಾ? ಇವೆಲ್ಲ ಕಡತಕ್ಕೆ ಹೋಯಿತು ಎಂದರೆ, ಜನ ನಮಗೆ ಏನೆಂದುಕೊಳ್ಳುತ್ತಾರೆ?

ಶ್ರೀ ಆಂಜನ ಮೂರ್ತಿ:– ನಾನು ಮಾನ್ಯ ಸದಸ್ಯರಿಗೆ ಒತ್ತಾಯ ಮಾಡುತ್ತಲೇ ಇದ್ದೇನೆ, ದಯವಿಟ್ಟು ನನ್ನ ಉತ್ತರ ಹೇಳಿದ ಮೇಲೆ ಸಮಾಧಾನವಾಗಲಿಲ್ಲದಿದ್ದರೆ ಆಗ ಚರ್ಚೆ ಮಾಡಿ. ಮಾನ್ಯ ಆರಗ ಜ್ಞಾನೇಂದ್ರರವರು, ಈ ಸರ್ಕಾರ ಹಳ್ಳಿಯಲ್ಲಿ ಸೈಟ್ ಹಂಚುತ್ತಾರೆ. ಆದರೆ ನಗರ ಪ್ರದೇಶಗಳಲ್ಲಿ ಹಂಚುವುದಕ್ಕೆ ಇಷ್ಟ ಇಲ್ಲವೇನೋ ಎಂದು ಹೇಳಿದರು. ಖಂಡಿತ, ಹಳ್ಳಿಗಾಗಲಿ, ನಗರಕ್ಕಾಗಲಿ ತಾರತಮ್ಯ ಇಲ್ಲವೇ ಇಲ್ಲ. ಹಳ್ಳಿ, ಗ್ರಾಮ ಪಂಚಾಯತ್‌ಗಳಿಗೆ ಯಾವ ರೀತಿ ನಾವು ಖಾಲಿ ನಿವೇಶನ ಆಗಲಿ, ಮನೆಯಾಗಲಿ ಹಂಚುವುದಕ್ಕೆ ಯಾವ ವ್ಯವಸ್ಥೆ ಮಾಡುತ್ತೇವೋ, ಯಾವ

ರೀತಿ ಮುತುವರ್ಜಿ ವಹಿಸುತ್ತೇವೋ, ಅದೇ ರೀತಿ, ನಗರ ಪ್ರದೇಶಗಳಲ್ಲಿ ಸಹ ಮಾಡುತ್ತಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಬಹಳ ಲಘುವಾಗಿ ಹೇಳಿದರೆಂಬುದು ನನ್ನ ಭಾವನೆ. ನಾವಿಲ್ಲಿ ಯಾರೂ ಚೌಕಾಬಾರ ಆಡುವುದಕ್ಕೆ ಬಂದಿಲ್ಲ, ಹುಡುಗರಲ್ಲ ಎಂದು ಹೇಳಿದರು.

ಶ್ರೀ ಜೆ. ಸಿ. ಮಾಧುಸ್ವಾಮಿ :– ನಾನೊಂದು ಪುರಸಭೆ ಬಗ್ಗೆ ಪ್ರಶ್ನೆ ಕೇಳಿದ್ದೆ. ನೀವು ಪಂಚಾಯತ್ ಆಕ್ಟ್ ಅಮೆಂಡ್‌ಮೆಂಟ್ ಆಗಿದೆ ಎಂದು ಹೇಳಬಾರದು.

ಶ್ರೀ ಆಂಜನ ಮೂರ್ತಿ :– ದಯವಿಟ್ಟು ಕೇಳಿ. ನಾನೂ ಒಬ್ಬ ಲಾಯರ್ ಆಗಿ ಹೇಳುತ್ತಿದ್ದೇನೆ. ಈವಾಗ ಮುನಿಸಿಪಲ್ ಕಾಯ್ದೆಯಡಿಯಲ್ಲಿ ಅದು ಯಾವುದು ಅಮೆಂಡ್ ಆಗಿಲ್ಲ ಎಂದರು. ಅಂಥದ್ದೇನಾದರೂ ನನ್ನ ಗಮನಕ್ಕೆ ತಂದರೆ, ನಾನು ಅವಕಾಶ ಕೊಡುತ್ತೇನೆ. ಅದೂ ನನಗೂ ಗೊತ್ತಾಗುತ್ತದೆ. ಅಲ್ಲಿ ಸ್ವಲ್ಪ ಸೈಲೆಂಟ್ ಇದೆ. ಕಾನೂನಿನಡಿಯಲ್ಲಿ ಗ್ರಾಮ ಪಂಚಾಯತ್‌ಗೆ ಕೊಟ್ಟಿರುವ ಅಧಿಕಾರವನ್ನು ಅದೇ ರೀತಿಯಲ್ಲಿ ಕೊಡಬೇಕೆನ್ನುವುದು ಸೂಕ್ತ. ತೊಡಕಿದೆ. ಅದಕ್ಕೋಸ್ಕರ, ದಯಮಾಡಿ ನಿಮ್ಮನ್ನು ಕೇಳುತ್ತಿದ್ದೇನೆ. ಅಂಥದ್ದು ಅಮೆಂಡ್‌ಮೆಂಟ್ ಇದ್ದರೆ, ಖಂಡಿತ....

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಮಾನ್ಯ ಉಪಾಧ್ಯಕ್ಷರೆ.....

ಉಪಾಧ್ಯಕ್ಷರು :– ಶ್ರೀರಾಮರೆಡ್ಡಿಯವರೆ, ಅವರು ಮುಗಿಸಲಿ.

(ಗೊಂದಲ)

ಉಪಾಧ್ಯಕ್ಷರು :– ಅವರು ಹೇಳುತ್ತಿದ್ದಾರೆ. ಸ್ವಲ್ಪ ಕೇಳಿ.

(ಗೊಂದಲ)

ಉಪಾಧ್ಯಕ್ಷರು :– ನೋಡೋಣ. ಅವರೇನು ಹೇಳುತ್ತಾರೆ.....

(ಗೊಂದಲ)

ಶ್ರಿ ಹೆಚ್. ಡಿ. ಬಸವರಾಜು :– ...ಈ ಅಮೆಂಡ್‌ಮೆಂಟ್ ಬರೀ ಮಾತು. ನಗರಸಭೆಗಳಿಗೆ ಅನ್ವಯಿಸುವುದೇ ಇಲ್ಲ.

(ಗೊಂದಲ)

ಉಪಾಧ್ಯಕ್ಷರು :– ಅವರು ಪೂರ್ಣ ಮಾಡಲಿ.

(ಗೊಂದಲ)

ಶ್ರಿ ಹೆಚ್. ಡಿ. ಬಸವರಾಜು :– ಈ ಹಿಂದೆ ಏನು ಪದ್ಧತಿ ಇತ್ತೋ ಅದು ಮುಂದುವರಿಯಬೇಕು.

(ಗೊಂದಲ)

ಮಾನ್ಯ ಸದಸ್ಯರು :– ಸಾರ್, ಆಕ್ಟ್ ಅಮೆಂಡ್ ಆಗಿದೆಯಾ? ಯಾವ ಮುನಿಸಿಪಾಲಿಟಿಯೊಳಗೂ.....

(ಗೊಂದಲ)

ಶ್ರೀ ಆಂಜನ ಮೂರ್ತಿ :– ಸಮಾಧಾನವಾಗಲಿಲ್ಲವೆಂದರೆ ಅದಕ್ಕೆ ಬೇರೆ ಸೂಚನೆ ಕೊಡಿ.

(ಗೊಂದಲ)

ಉಪಾಧ್ಯಕ್ಷರು :– ಒಂದು ನಿಮಿಷ, ಆರಗ ಜ್ಞಾನೇಂದ್ರರವರೆ....

(ಗೊಂದಲ)

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಅವರು ಉತ್ತರ ಕೊಟ್ಟಿರತಕ್ಕಂಥದ್ದು ಪಂಚಾಯಿತಿ ಆಕ್ಟ್‌ಗೆ. ಇಲ್ಲಿ ಕೇಳಿರತಕ್ಕಂಥ ಪ್ರಶ್ನೆ ಮುನಿಸಿಪಲ್ ಆಕ್ಟ್. ಮುನಿಸಿಪಲ್ ಆಕ್ಟ್‌ನಲ್ಲಿ ಆ ರೀತಿ ಅಮೆಂಡ್‌ಮೆಂಟ್ ಆಗಿದ್ದರೆ, ದಯವಿಟ್ಟು, ಮಂತ್ರಿಗಳು ತೆಗೆದುಕೊಂಡು ಬಂದು ತೋರಿಸಲಿ.

ಉಪಾಧ್ಯಕ್ಷರು :– ಅಲ್ಲ ಅಲ್ಲ, ಶ್ರೀರಾಮರೆಡ್ಡಿಯವರೇ....,

(ಗೊಂದಲ)

ಶ್ರೀ ಆಂಜನ ಮೂರ್ತಿ :– ಈಗಾಗಲೇ ತಮಗೆ ಗೊತ್ತಿರಬಹುದು ಉಪಾಧ್ಯಕ್ಷರೆ....

ಉಪಾಧ್ಯಕ್ಷರು :– ಅಲ್ಲ, ಒಂದು ನಿಮಿಷ ಇರಿ.

ಶ್ರೀ ಎ. ಟಿ. ರಾಮಸ್ವಾಮಿ :– ಸನ್ಮಾನ್ಯ ಉಪಾಧ್ಯಕ್ಷರೆ,....

ಉಪಾಧ್ಯಕ್ಷರು :– ರಾಮಸ್ವಾಮಿಯವರೆ, ಒಂದು ನಿಮಿಷ.....ಅಲ್ಲ ಅಲ್ಲ, ಅವರಿನ್ನೂ ಪೂರ್ಣ ಮಾಡಿಲ್ಲ ಉತ್ತರವನ್ನು. ಮಧ್ಯದಲ್ಲೇ ನೀವು ಸುಮ್ಮನೆ....

(ಗೊಂದಲ)

ಶ್ರೀ ಆಂಜನ ಮೂರ್ತಿ :– ತಮಗೆ ಗೊತ್ತಿರುವ ಪ್ರಕಾರ, ಇದೇ ಸದನದಲ್ಲಿ ಪಕ್ಷಾತೀತವಾಗಿ ಎಲ್ಲಾ ಸದಸ್ಯರುಗಳನ್ನೂ ಪಂಚಾಯತ್‌ಗೆ ಬದಲಾಗಿ ಶಾಸಕರ ನೇತೃತ್ವದಲ್ಲೇ ಕೊಡಬೇಕೆಂದು ಎಲ್ಲರೂ ಇಲ್ಲಿ ಒತ್ತಾಯ ಮಾಡಿರುವ ವಿಚಾರ. ಆದರೆ, ಪಂಚಾಯಿತಿ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿರುವುದು. ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅದೂ ಗೊತ್ತಿರುವ ವಿಚಾರ. ಇವತ್ತಿರುವುದೆಂದರೆ, ಟಿಎಂಸಿಗಳು, ಮುನಿಸಿಪಲ್ ಮತ್ತು ನಗರ ಪ್ರದೇಶಗಳಿಗೆ ಆ ರೀತಿಯಾದ ಆಕ್ಟ್ ನೀವು ಮಾಡಿಲ್ಲ, ಅದು ಸೈಲೆಂಟ್ ಆಗಿದೆ. ಆದ್ದರಿಂದ, ನಾನು ಹಿರಿಯ ಸದಸ್ಯರಾದ ಮಾಧುಸ್ವಾಮಿಯವರಿಗೆ, ಶ್ರೀರಾಮರೆಡ್ಡಿಯವರಿಗೆ, ಸ್ವಲ್ಪ ವಕೀಲಿ ವೃತ್ತಿಯೂ ಗೊತ್ತು ಅವರಿಗೆ ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ, ಇವತ್ತೇನೂ ಇದು ಮುಗಿಯೋದಿಲ್ಲ ಆ ರೀತಿ ಏನಾದರೂ ಅಮೆಂಡ್ ಮಾಡುವುದಕ್ಕೆ ಅಥವಾ ಅಧಿಕಾರ ಟಿಎಂಸಿಗೂ ಮತ್ತು ನಗರ ಪ್ರದೇಶಕ್ಕೆ ಕೊಡುವುದಾದರೆ, ಅದಕ್ಕೆ ಏನಾದರೂ ಸೂಚನೆ ಕೊಡಿ.

(ಗೊಂದಲ)

ಉಪಾಧ್ಯಕ್ಷರು :– ಈಗ ಮುಖ್ಯಮಂತ್ರಿಗಳು ಬಂದಿದ್ದಾರೆ. ಜ್ಞಾನೇಂದ್ರರವರೇ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ :– ನಾವು ಮುಖ್ಯಮಂತ್ರಿಗಳ ಕೂಡ ಗಮನಕ್ಕೆ ತರುತ್ತಿದ್ದೇವೆ....

(ಗೊಂದಲ)

ಉಪಾಧ್ಯಕ್ಷರು :– ಮಾಧುಸ್ವಾಮಿಯವರೆ, ನೀವು ಹೇಳಿ. ಅವರನ್ನು ಕೂರಿಸಿ. ನೀವು ಮುಗಿಸಿ ಬೇಗ. ಪಾಪಣ್ಣರವರನ್ನು ಕೂರಿಸಿ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ :– ಪುರಸಭೆಯಲ್ಲಿ ಆಶ್ರಯ ಸಮಿತಿ ಮಾಡುವುದಕ್ಕೆ ಯಾವುದೇ ಕಾಯ್ದೆಗೆ ಅಮೆಂಡ್‌ಮೆಂಟ್ ಆಗಿಲ್ಲ. ಯಾವತ್ತೂ ಇಲ್ಲಿ ಬಂದಿಲ್ಲ. ನಾವು ಪುರಸಭೆಗೆ ಏಕೆ ಆಶ್ರಯ ಸಮಿತಿ ಮಾಡುವುದಿಲ್ಲ. ಅಂದರೆ ಮಂತ್ರಿಗಳು ಗ್ರಾಮ ಪಂಚಾಯತ್ ಆಕ್ಟ್ ಅಮೆಂಡ್ ಆಗಿದೆ ಎಂದರೆ ನಾವು ಎಲ್ಲಿಗೆ ಹೋಗಬೇಕು? ಪುರಸಭೆಗೆ ಕಾಯ್ದೆಗೆ ಅಮೆಂಡ್ ಆಗಿದ್ದರೆ ತಾವು

ಪುರಸಭೆಗೆ ಮಾಡಿ. ಸೈಟ್, ಮನೆ ಕೊಡುವುದಕ್ಕೆ ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ. ನಾವೇನೋ ಕೇಳಿದರೆ ನೀವೇನೋ ಉತ್ತರ ಹೇಳುತ್ತೀರಿ. ಪುರಸಭೆಗೆ ಏಕೆ ಆಶ್ರಯ ಮನೆ ನೀಡಲಿಲ್ಲವೆಂದರೆ, ಅವರು ಗ್ರಾಮ ಪಂಚಾಯತ್ ಆಕ್ಟ್‌ಗೆ ಅಮೆಂಡ್ ಮಾಡಿದ್ದೇವೆಂದು ಉತ್ತರ ಕೊಟ್ಟರೆ, ನಾವು ಎಲ್ಲಿಗೆ ಹೋಗಬೇಕು?

(ಗೊಂದಲ)

ಶ್ರೀ ಆಂಜನ ಮೂರ್ತಿ :– ಇವತ್ತು ಅಧಿಕಾರ ವಿಕೇಂದ್ರೀಕರಣದ ಅಡಿಯಲ್ಲಿ ಗ್ರಾಮ ಪಂಚಾಯತ್ ಆಕ್ಟ್ ಮಾಡಿದ್ದೇವೆ. ಕೇಳಿರುವ ಪ್ರಶ್ನೆ ಸೂಕ್ತವಾಗಿದೆ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ :– ಪುರಸಭೆ ಆ್ಯಕ್ಟ್‌ಗೆ ತಿದ್ದುಪಡಿಯಾಗಿಲ್ಲ. ಅದರಲ್ಲಿ ಪುರಸಭೆ ಬರುವುದಿಲ್ಲ, ನಾವು ಸ್ಪಷ್ಟವಾಗಿ ಪುರಸಭೆಯಲ್ಲಿ ಕೇಳಿದ್ದೇವೆ.

ಶ್ರೀ ಆಂಜನ ಮೂರ್ತಿ :– ನಾನು ಉತ್ತರ ಹೇಳುವವರಿಗೆ ಕೇಳಿ. ಸ್ವಲ್ಪ ಪರಿಜ್ಞಾನ ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ :– ಗ್ರಾಮ ಸಭೆಗಳಿಗೂ, ಪುರಸಭೆಗಳಿಗೂ ವ್ಯತ್ಯಾಸವಿಲ್ಲವೆ?

ಶ್ರೀ ಆಂಜನ ಮೂರ್ತಿ :– ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ದಯಮಾಡಿ ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ಹೇಳುತ್ತಿರುವುದು ಸರಿಯಲ್ಲ.

ಶ್ರೀ ಹೆಚ್. ಡಿ. ಬಸವರಾಜು :– ಪರಿಗಣಿಸುತ್ತೇವೆಂದು ಹೇಳಬೇಕು ಅಲ್ಲವೆ?

ಶ್ರೀ ಆಂಜನ ಮೂರ್ತಿ :– ಪರಿಗಣಿಸುತ್ತೇವೆ. ಇಲ್ಲವೆಂದಲ್ಲ.

ಉಪಾಧ್ಯಕ್ಷರು :– ಬಸವರಾಜುರವರೇ ಕುಳಿತುಕೊಳ್ಳಿ, ಶ್ರೀರಾಂರೆಡ್ಡಿಯವರೇ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ. ಟಿ. ರವಿ :– ಒಂದು ವರ್ಷದಲ್ಲಿ ಬಡವರಿಗೆ ನಗರ ಪ್ರದೇಶದಲ್ಲಿ ಎಷ್ಟು ಮನೆ ಕೊಟ್ಟಿದ್ದಾರೆ ಹೇಳಿ. ಅಯ್ಕೆ ಯಾರ ಮೂಲಕ ಮಾಡಿದ್ದಾರೆ? ಏನೂ ಕೊಟ್ಟಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ :– ನೋ ನೋ ಪ್ರಶ್ನೆ ಅದು ಅಲ್ಲ. ಪುರಸಭೆ ಕಾಯ್ದೆ ಅಮೆಂಡ್ ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷರು :– ಒಂದು ನಿಮಿಷ ರಾಮಸ್ವಾಮಿಯವರೇ, ತಾವು ಏನು ಹೇಳಬೇಕು ಎಂದು ಹೇಳುತ್ತೀರಿ ಹೇಳಿ.., ರವಿಯವರೇ, ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :– ಈಗ ಪಂಚಾಯಿತಿಯಲ್ಲಿ ಕೊಡತಕ್ಕಂಥದ್ದು ಅದಕ್ಕೆ ಸಂವಿಧಾನ ತಿದ್ದುಪಡಿಯಾಗಿ ಗ್ರಾಮಪಂಚಾಯಿತಿಗೆ ವಹಿಸಿಕೊಡಬೇಕೆಂದು ಆಗಿದೆ. ಅದಕ್ಕೆ ಇದರಲ್ಲಿ ಬಹಳಷ್ಟು ವಿವರವಾಗಿ ಚರ್ಚೆಯಾಗಿ ಕೊನೆಯದಾಗಿ, ಅಲ್ಲಿ ಒಂದು ವಿಜಿಲೆನ್ಸ್ ಕಮಿಟಿ ಮಾಡಬೇಕು, ಇದರ ಮೇಲೆ ಓವರ್ ಆಲ್, ಗಂಗಾಕಲ್ಯಾಣ ಇರಲಿ ಮತ್ತೊಂದು ಇರಲಿ ಒಟ್ಟಾರೆಯಾಗಿ ಈ ಕಮಿಟಿ ಮಾಡಬೇಕೆನ್ನುವ ತೀರ್ಮಾನವನ್ನು ನಾವು ಎಲ್ಲರೂ ಮೊನ್ನೆ ತೆಗೆದುಕೊಂಡೆವು. ನಾವು, ಉಪ ಮುಖ್ಯಮಂತ್ರಿಗಳು ಹಾಗೂ ತಾವು ಕೂಡ ಸನ್ಮಾನ್ಯ ಸಭಾಧ್ಯಕ್ಷರ

ಕೊಡಿಯಲ್ಲಿ ಮಾತನಾಡಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಇದಕ್ಕೆ ತಾವು ಒಪ್ಪಿದಿರಿ. ಈ ಪುರಸಭೆಗಳಿಗೆ ಆಗಿಲ್ಲ, ಇಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮಾಡಬೇಕು ಎನ್ನುವುದು ಏನು ಇದೆ, ಅದನ್ನು ನಾವು ಮಾಡುತ್ತೇವೆ.

ಉಪಾಧ್ಯಕ್ಷರು :– ಆಯಿತು ಈಗ ಚಂದ್ರಣ್ಣನವರು.

SRI BASAVARAJA RAYA REDDY :- What he has done is correct.

ಶ್ರೀ ಆಂಜನಮೂರ್ತಿ :– ಸ್ವಲ್ಪ ಕಾನೂನಿನ ತೊಡಕು ಇದೆ ಅದಕ್ಕೆ ಇದರ ಬಗ್ಗೆ ಚರ್ಚೆ ಮಾಡಿ ಹೇಳುತ್ತೇನೆಂದೇ ನಾನು ಹೇಳಿದ್ದು.. ಶಂಖದಿಂದ ನೀರು ಬಂತಲ್ಲಾ ಈಗ ಬಿಡಿ..

ಉಪಾಧ್ಯಕ್ಷರು :– ಈಗ ಆಯಿತಲ್ಲಾ ಬಿಡಿ. ಅವರು ಮುಗಿಸಲಿ.

ಶ್ರೀ ಧರ್ಮಸಿಂಗ್ :– ಅಂಜನಮೂರ್ತಿಯವರು ಹಿರಿಯ ಸದಸ್ಯರಾಗಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– ನಮಗೆ ಸಮಾಧಾನವಾಗಿದ್ದರೆ, ನಿಮ್ಮನ್ನು ಶ್ಲಾಘಿಸುತ್ತೇವೆ. ಇಲ್ಲಿಗೆ ಅದನ್ನು ಸಾಕು ಮಾಡೋಣ.

ಶ್ರೀ ಧರ್ಮಸಿಂಗ್ :– ಅಂಜನಮೂರ್ತಿಯವರೂ ಕೂಡ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ, ಅವರೇನು ಹೇಳಿದ್ದಾರೆಂದರೆ, ಪಂಚಾಯತ್ ಲೈಕ್ಟ್‌ಗೆ ಇದು ಅನ್ವಯವಾಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಿ ಹೇಳುತ್ತೇನೆಂದು ಹೇಳಿದ್ದಾರೆ...ಆಯಿತು ಮಾಡುತ್ತೇವೆ...

(ಗೊಂದಲ)

ಉಪಾಧ್ಯಕ್ಷರು :– ಆಯಿತು ಸಂತೋಷವಾಗಿದೆ, ಮಾನ್ಯ ಅಂಜನಮೂರ್ತಿಯವರು ಕೂಡ ಅದನ್ನೇ ಹೇಳಿದ್ದು. ಪರಿಶೀಲಿಸಿ ನಾಳೆ ನಾಡಿದ್ದು ಹೇಳುತ್ತೇನೆಂದು ಅವರೂ ಕೂಡ ಹೇಳಿದ್ದರು.

ಶ್ರೀ ಆರಗ ಜ್ಞಾನೇಂದ್ರ :– ಆದಷ್ಟು ಶೀಘ್ರವಾಗಿ ಮಾಡಲಿ ಸಾರ್.

ಉಪಾಧ್ಯಕ್ಷರು :– ಈಗ ಆಯಿತು ಅವರು ಒಪ್ಪಿಕೊಂಡಿದ್ದಾರೆ, ಇದು ಮುಗಿಯಿತು.

ಶ್ರೀ ಆರಗ ಜ್ಞಾನೇಂದ್ರ :– ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತೇನೆ. ಆದಷ್ಟು ಬೇಗ ಇದನ್ನು ಕಾನ್‌ಸ್ಟಿಟ್ಯೂಟ್ ಮಾಡಿ, ನಗರ ಪ್ರದೇಶದಲ್ಲಿರುವ ಬಡವರಿಗೆ ಮನೆ ಮತ್ತು ನಿವೇಶನವನ್ನು ಹಂಚಲು ಅವಕಾಶ ಮಾಡಿಕೊಡಿ..

ಶ್ರೀ ಶ್ರೀರಾಮರೆಡ್ಡಿ :– ಸಾರ್, ನನ್ನದೊಂದು ಹೇಳಿಕೆ ಕೊಡಿಸಿ ಸಾರ್.

ಶ್ರೀ ಹೆಚ್. ಡಿ. ಬಸವರಾಜು :– ಇದನ್ನು ಕೂಡ 5 ನೇ ತಾರೀಖಿನೊಳಗೆ ಮಾಡಿ ಎಂಬುದು ನನ್ನ ಮನವಿ ಸಾರ್.

ಉಪಾಧ್ಯಕ್ಷರು :– ಈಗ ಬಾಲಕೃಷ್ಣರವರು, ಕೇಳಿ.

ಶ್ರೀ ಕೆ. ಎನ್. ರಾಜಣ್ಣ :– ಒಳ್ಳೆಯ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ನಾವು ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಆದರೆ ಒಂದು ಸಲಹೆ, ವಸತಿ ಸಚಿವರು ಏನು ಇದ್ದಾರೆ, ವಸತಿ ಸಚಿವರು ಎನ್ನುವ ನಾಮೆಂಕ್ಲೇಚರನ್ನು ವಸತಿ ಹೀನ ಸಚಿವರೆಂದು ಮಾಡಿದರೆ ಎಲ್ಲರಿಗೂ ಕೂಡ ಬಹಳ ಸಮಾಧಾನವಾಗುತ್ತದೆ, ಇದು ನನ್ನ ಸಲಹೆ.

ಉಪಾಧ್ಯಕ್ಷರು :– ಆಯಿತು ಇದು ಮುಗಿಯಿತು. ಬೇರೆ ಕೇಳಿ..

(ಈ) ವಿಷಯ :– ಬೆಂಗಳೂರು ನಗರ ಹಾಗೂ ಗ್ರಾಮಾಂತರ ರಸ್ತೆಗಳು ತುಂಬಾ ಹಾಳಾಗಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದರ ಬಗ್ಗೆ.